ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು–560065

# * ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

**ದಿನಾಂಕ:** 21.05.2021

## ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ

### ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

### (ದಿನಾಂಕ **22-05-2021** ರಿಂದ **26-05-2021**ವರೆಗೆ)

| ನಿಯತಾಂಕಗಳು | 22.05.2021 | 23.05.2021 | 24.05.2021 | 25.05.2021 | 26.05.2021 |
|---|---|---|---|---|---|
| ಮಳೆ (ಮಿ ಮಿ) | 21 | 10 | 6 | 2 | 1 |
| ಗರಿಷ್ಠ ಉಷ್ಣಾಂಶ °(ಡಿ.ಸೆ. ) | 29 | 29 | 29 | 31 | 33 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 21 | 21 | 22 | 22 | 22 |
| ಮೋಡ (ಪ್ರಮಾಣ) | 8 | 8 | 7 | 4 | 4 |
| ಆರ್ದ್ರತೆ 7.20 ಬೆ (ಶೇ) | 87 | 89 | 90 | 84 | 85 |
| ಆರ್ದ್ರತೆ 2.20 ಮ (ಶೇ) | 84 | 84 | 86 | 84 | 84 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 8 | 8 | 9 | 8 | 8 |
| ಗಾಳಿಯ ದಿಕ್ಕು ( ಡಿಗ್ರಿ) | 249 | 257 | 270 | 283 | 270 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರದಿಂದ ಸಾದಾರಣ ಮಳೆ0ಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **29.0-33.0°C** ಮತ್ತು ಕನಿಷ್ಠ **21.0-22.0°C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **84-90 %** ಇದ್ದು ಮಧ್ಯಾಹ್ನ **84-86 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **8-9** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

- ರೋಹಿಣಿ ನಕ್ಷತ್ರದ ಮಳೆಯ ಕಾಲವು ಮೇ ತಿಂಗಳ 25 ರಿಂದ ಜೂನ್ 7 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 61.9 ಮಿ.ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ | ➢ ಮುಂಗಾರು ಮಾರುತಗಳು ಬಂಗಾಳಕೊಲ್ಲಿಯಲ್ಲಿ ಹಾಗು ಅಂಡಮಾನ್ ಮತ್ತು ನಿಕೋಬರ್ ಸಮುದ್ರದಲ್ಲಿ ಪ್ರಾರಂಭವಾಗಲು ಆರಂಭಿಸಿವೆ.<br>➢ ಅಂಡಮಾನ್ ಸಮುದ್ರದಲ್ಲಿ ಉಂಟಾಗಿರುವ ಮೇಲ್ಮೈ ಸುಳಿಗಾಳಿ ಮತ್ತು ಬಂಗಾಳ ಕೊಲ್ಲಿಯಲ್ಲಿ ವಾಯುಬಾರ ಕುಸಿತದಿಂದ ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಹಗುರದಿಂದ ಸಾದಾರಣ ಮಳೆಯಾಗುವ ಸಂಭವವಿದೆ ಹಾಗೂ 24 ನೇ ಮೇ 2021 ರಂದು ಚಂಡಮಾರುತವಾಗುವ ಸಾಧ್ಯತೆ ಹೆಚ್ಚು.<br>➢ ಉತ್ತಮ ಮಳೆಯ ಮುನ್ಸೂಚನೆ ಇರುವುದರಿಂದ ಪೂರ್ವ ಮುಂಗಾರು ಬೆಳೆಗಳನ್ನು ಬಿತ್ತಲು ಇದು ಸೂಕ್ತ ಸಮಯ.<br>➢ ಮುಂಬರುವ ಬಿತ್ತನೆಗೆ ಅಗತ್ಯವಿರುವ ಬಿತ್ತನೆ ಬೀಜಮಾದರಿ0ಯನ್ನು ಬೀಜಪರೀಕ್ಷಾಲ0ಯಕ್ಕೆ ಕಳುಹಿಸುವ ಮೂಲಕ ಮೊಳಕೆ ಪ್ರಮಾಣದ ಸಾಮರ್ಥ್ಯ ತಿಳಿದುಕೊಳ್ಳುವುದು.<br>➢ ಉತ್ತಮ ಮಳೆಯ ಮುನ್ಸೂಚನೆ ಇರುವುದರಿಂದ ಖುಷ್ಕಿ ಜಮೀನಿನಲ್ಲಿ ಬದು ಮತ್ತು ಬಸಿಗಾಲುವೆಗಳನ್ನು ಸ್ವಚ್ಛ ಮಾಡುವುದು ಹಾಗು ಕೃಷಿ ಹೊಂಡಗಳನ್ನು ದುರಸ್ತಿಗೊಳಿಸಿ ನೀರು ನಿಧಾನವಾಗಿ ಹರಿಯುವಂತೆ ಮಾಡುವುದು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಮಾಡುವ್ಯದು.<br>➢ ಉತ್ತಮ ಮಳೆಯ ಅವಕಾಶ ಇರುವುದರಿಂದ ಬದುಗಳ ಸುತ್ತಲು ಮೇವಿನ ಹುಲ್ಲಿನ ಬೀಜಗಳನ್ನು ಬಿತ್ತನೆ ಮಾಡಿ ಇದರಿಂದ ಬದುಗಳು ಭದ್ರವಾಗಿರುತ್ತವೆ ಮತ್ತು ಜಮೀನುಗಳಲ್ಲಿ ನೀರಿನ ತೇವಾಂಶವನ್ನು ಕಾಪಾಡುತ್ತದೆ.<br>➢ ಬೇಸಿಗೆ ಉಳುಮೆ ಮಾಡುವುದರಿಂದ ಹುಳುಗಳ ವಿವಿಧ ಹಂತಗಳನ್ನು ನಾಶಪಡಿಸಬಹುದು ಮತ್ತು ಕಳೆಗಳನ್ನು ನಿಯಂತ್ರಿಸಬಹುದು.<br>➢ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಸರಾಸರಿ 36 ಮತ್ತು 93 ಮಿ.ಮೀ ಇರುವುದರಿಂದ ಎರಡುಬೆಳೆ ಪದ್ಧತಿಯಲ್ಲಿ ಮೊದಲ ಬೆಳೆಯಾಗಿ, ಈ ಕೆಳಗಿನ ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ.<br>ಎಳ್ಳು : ನವಿಲೆ–1, ಟಿ–7, ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ: ಎಚ್.ಎ–1,2,3 ಮತ್ತು 4 |

| | |
|---|---|
| | ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ<br>➢ ಕೆರೆಗಳಲ್ಲಿ ಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು<br>➢ ಪೂರ್ವ ಮುಂಗಾರಿಗೆ ಅಲಸಂದೆ, ಎಳ್ಳು ಮತ್ತು ಅವರೆ ಬಿತ್ತನೆ ಬೀಜಗಳನ್ನು ಸಿದ್ಧತೆಗಳನ್ನು ಮಾಡಿಕೊಳ್ಳಿ,<br>➢ ಹಿಂಗಾರಿ ಬೆಳೆಗಳ ಉಳಿಕೆಗಳನ್ನು ಸುಡಬಾರದು, ಅದನ್ನು ಗೊಬ್ಬರ ತಯಾರಿಸಲು ಉಪಯೋಗಿಸಬೇಕು.<br>➢ ತರಕಾರಿ ಮತ್ತು ಹಣ್ಣಿನ ಬೆಳೆಗಳಲ್ಲಿ ಪ್ಲಾಸ್ಟಿಕ್ ಹೊದಿಕೆಯನ್ನು ಮಾಡಿ ಹನಿ ನೀರಾವರಿ ಕೊಡುವುದರಿಂದ ತೇವಾಂಶವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ ಮತ್ತು ಕಳೆಗಳ ನಿಯಂತ್ರಣವಾಗುತ್ತವೆ.<br>ಅವರೆ ಎಳ್ಳು : ನವಿಲೆ–1, ಟಿ–7, ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ: ಎಚ್.ಎ–1,2,3 ಮತ್ತು 4<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ |
| **ಮಾವು** | ➢ ಹೆಚ್ಚು ಗಾಳಿ ಮತ್ತು ಮಳೆಯಿಂದಾಗಿ ಮಾವಿನಲ್ಲಿ ಹಣ್ಣುಗಳು ಉದುರುವುದು ಸಾಮಾನ್ಯವಾಗಿರುತ್ತದೆ ಮತ್ತು ಹಣ್ಣಿನ ನೊಣಗಳ ಹಾವಳಿ ಕೂಡ ಹೆಚ್ಚಾಗಿ ಕಂಡುಬರುತ್ತದೆ, ಇದರ ಹತೋಟಿಗೆ ಕಾರ್ಬರಿಲ್ 4 ಗ್ರಾಂ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ.<br>➢ ಹಣ್ಣನ್ನು ಕಟಾವು ಮಾಡುವ ಸಮ0ಯದಲ್ಲಿ ನೆಲಕ್ಕೆ ತಾಗದ ರೀತಿ ಎಚ್ಚರ ವಹಿಸಿ. ಇದರಿಂದ ಕಟಾವಿನ ನಂತರ ಶಿಲೀಂಧ್ರದಿಂದ ಬರುವ ಹಲವಾರು ರೋಗಗಳನ್ನು ತಡೆ0ಯಬಹುದು. |
| | **ಹೈನುಗಾರಿಕೆ** |
| **ಪಶುಸಂಗೋಪನೆ** | **ಬೇಸಿಗೆ ತಿಂಗಳಿನಲ್ಲಿ ಪಶು ಸಂಗೋಪನಾ ಸಲಹೆಗಳು :**<br>➢ ಬಿಸಿಲು ಹೆಚ್ಚಾಗಿರುವುದರಿಂದ ಹಸಿರು ಹುಲ್ಲಿನ ಅಭಾವ ಕಂಡುಬರುತ್ತದೆ ಆದುದರಿಂದ ಹಗೇವಿನಲ್ಲಿ ರಸಮೇವನ್ನು ತಯಾರಿಸಿ ಮತ್ತು ಒಣ ಹುಲ್ಲು ಮತ್ತು ಬೆಳೆಯ ಉಳಿಕೆಗಳನ್ನು ದನಕರುಗಳಿಗೆ ಕೊಡಿ.<br>➢ ದನಕರುಗಳ ಕೊಟ್ಟಿಗೆಯ ಮೇಲೆ 4–6 ಇಂಚು ಹುಲ್ಲಿನ ಹೊದಿಕೆಯನ್ನು ಹಾಕಿ, ಮದ್ಯಾಹ್ನದಲ್ಲಿ 2–3 ಸಲ ನೀರು ಹೊಡೆಯಬೇಕು ಹಾಗೂ ಕೊಟ್ಟಿಗೆಯ ನೆಲ ಮತ್ತು ಗೋಡೆಗಳಿಗೂ ಸಹ ನೀರು ಹೊಡೆಯಬೇಕು. ಇದರಿಂದ ಕೊಟ್ಟಿಗೆಯು ತಕ್ಕಮಟ್ಟಿಗೆ ತಂಪಾಗಿ ಉಳಿಯುತ್ತದೆ.<br>➢ ಕೊಟ್ಟಿಗೆಯಲ್ಲಿ ಗಾಳಿ ಸರಾಗವಾಗಿ ಆಡುವಂತೆ ವ್ಯವಸ್ಥೆ ಮಾಡಬೇಕು.<br>➢ ಸ್ವಚ್ಛವಾದ ನೀರನ್ನು ಮೇಲಿಂದ ಮೇಲೆ ಕುಡಿಸಬೇಕು.<br>ರಾಸುಗಳನ್ನು ಬಿಸಿಲಿಗೆ ಬಿಡಬಾರದು, ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ರಾಸುಗಳನ್ನು ಮೇಯಲು ಬಿಡಬೇಕು. |
| **ಕೋಳಿ ಸಾಕಾಣಿಕೆ** | **ಬೇಸಿಗೆ ತಿಂಗಳಿನಲ್ಲಿ ಕೋಳಿ ಸಾಕಾಣಿಕೆ ಸಲಹೆಗಳು :**<br>ಸರಾಸರಿ ಉಷ್ಣಾಂಶ 33–36 $^{o}$**C** , ಸರಾಸರಿ ಆರ್ದ್ರತೆ ಪ್ರಮಾಣ, < 50 % (RH) **ಮತ್ತು** ಸರಾಸರಿ ಗಾಳಿಯ ವೇಗ < 5 ಕಿ.ಮೀ/ಘಂಟೆಗೆ<br>➢ ನೀರಿನ ಟ್ಯಾಂಕ್ ನ ಮೇಲ್ಭಾವಣಿಯನ್ನು ಒದ್ದೆಯಾದ ಗೋಣಿ ಚೀಲದಲ್ಲಿ ಮುಚ್ಚಿಡಬೇಕು ಇದರಿಂದ ನೀರು ಬಿಸಿಯಾಗುವುದನ್ನು ತಡೆಯಬಹುದು.<br>➢ ಬೇಸಿಗೆ ಹೆಚ್ಚಾಗಿರುವುದರಿಂದ ಕೋಳಿಗಳಿಗೆ ಬೆಳಗಿನ ಜಾವ ಮತ್ತು ಸಂಜೆ ವೇಳೆಯಲ್ಲಿ ನೀರನ್ನು ಯತೇಚ್ಚವಾಗಿ ಕೊಡಬೇಕು.<br>➢ ಕಿಟಕಿಯಲ್ಲಿ ಗಾಳಿಯು ಸರಾಗವಾಗಿ ಬೀಸುವ ಹಾಗೆ ನೋಡಿಕೊಳ್ಳಬೇಕು<br>➢ ಪೆಡೆಸ್ಟ್ರಾನ್ ಫ್ಯಾನ್ ಮೂಲಕ ಬಿಸಿ ಗಾಳಿಯು ಹೊರಹೋಗುವಂತೆ ನೋಡಿಕೊಳ್ಳಬೇಕು. |


**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**


**ಮೊಬೈಲ್ ಆಪ್:**

- ➢ ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ➢ ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.